ಕನ್ನಡ ಸಾಹಿತ್ಯ ಲೋಕದ ಪ್ರಮುಖ ಕಥೆಗಾರ್ತಿ ಸುಮಂಗಲಾ, ಅನುವಾದ ಕ್ಷೇತ್ರದಲ್ಲಿಯೂ ಗುರುತಿಸಿಕೊಂಡವರು. ಅಂಕಣಕಾರ್ತಿಯಾಗಿ ಓದುಗರಿಗೆ ಪರಿಚಿತರು. ಅವರ ಹುಟ್ಟೂರು ಶಿವಮೊಗ್ಗದ ಸಾಗರ. ಪ್ರಸ್ತುತ ಬೆಂಗಳೂರು ನಿವಾಸಿ. ಓದಿದ್ದು ರಸಾಯನಶಾಸ್ತ್ರ ಸ್ನಾತಕೋತ್ತರ ಪದವಿ. 'ಹನ್ನೊಂದನೇ ಅಡ್ಡರಸ್ತೆ', 'ಕಾಲಿಟ್ಟಲ್ಲಿ ಕಾಲುದಾರಿ', 'ಸೀತಾಳೆ ಹೂ ಮತ್ತು ಇತರ ಕತೆಗಳು', 'ಜುಮುರು ಮಳೆ', ಕಥಾಸಂಕಲನ ಮತ್ತು ಹಲವು ಕೃತಿಗಳನ್ನು ಪ್ರಕಟಿಸಿದ್ದಾರೆ.

ಕಾಣಿಸಿತು. ನಾಳೆ ಮಾತಾಡಣ ಅಂದುಕೊಂಡು ಕ್ಯಾಬ್ ಹತ್ತಿದಳು.

ಎಷ್ಟೋ ವರ್ಷಗಳ ನಂತರ ಲವಲವಿಕೆಯ ಗಂಧವೊಂದು ಎಲ್ಲಿಂದಲೋ ಬಂದು ತೀಡಿದಂತೆ ಮುದಗೊಂಡಳು.

ಡೆಕಾತ್ಲಾನಿಗೆ ಬಂದವಳು ಹೆಂಗೂ ರಮೇಶ ಮನೆಗೆ ಬರೋದು ತಡ ತಾನೆ ಎಂದುಕೊಂಡು ನಿಧಾನವಾಗಿ ಹತ್ತಾರು ಸೈಕಲ್ಲುಗಳನ್ನು ನೋಡಿದಳು. ಅದೂ ಇದೂ ಪ್ರಶ್ನೆ ಕೇಳಿ ತೋರಿಸುತ್ತಿದ್ದವನ ತಲೆ ತಿಂದಳು. ಅಂತೂ ಕೊನೆಗೊಮ್ಮೆ ಸೈಕಲೊಂದನ್ನು ಆರಿಸಿ, ಬಿಲ್ ಮಾಡಿಸಿದಳು. ಅಲ್ಲಿಯೇ ಬೀಗವನ್ನೂ ಕೊಂಡಳು. ಸೈಕಲ್ ಸವಾರಿ ಹೋದಾಗ ನೀರಿನ ಬಾಟಲಿ, ಕರವಸ್ತ್ರ, ಮೊಬೈಲ್ ಇಟ್ಟುಕೊಳ್ಳುವುದಕ್ಕೆ ಈ ಬಗೆಯ ತೆಳುವಾದ, ಹಗುರಾದ ಪಾಲಿಸ್ಟರಿನ ಬ್ಯಾಕ್ ಪ್ಯಾಕ್ ತೆಗೆದುಕೊಳ್ಳಿ ಎಂದು ಸೈಕಲ್ ತೋರಿಸಿದ ಹುಡುಗ ಶಿಫಾರಸು ಮಾಡಿದ. ಅರೆ, ಇದೂ ಬೇಕೇ ಬೇಕಲ್ಲವಾ ಎಂದು ಅದನ್ನೂ ಕೊಂಡಳು. ರಮೇಶನಿಗೆ ಕೇಳುವುದು ದೂರವುಳಿಯಿತು, ಹೇಳುವ ಅಗತ್ಯವೂ ಇಲ್ಲದಂತೆ ಹೀಗೆ ಪಟಪಟನೆ ಕಾರ್ಡು ಸ್ವೈಪಿಸುವ ತನ್ನ ಬಗ್ಗೆಯೇ ಹೆಮ್ಮೆಪಟ್ಟಳು. ಆ ಹುಡುಗ, ಸೈಕಲನ್ನು ತೆಗೆದುಕೊಂಡು, ಆ ಕಡೆ ಬನ್ನಿ, ಟೈರ್ ಎಲ್ಲ ಸರಿಯಾಗಿ ಚೆಕ್ ಮಾಡಿಸಿ, ಗಾಳಿ ಹಾಕಿಸಬೇಕು ಎಂದು ಪಕ್ಕಕ್ಕೆ ಕರೆದೊಯ್ದ. ಅದೆಲ್ಲ ಮುಗಿಯುವಷ್ಟರಲ್ಲಿ ಆರೂವರೆಯಾಯಿತು. 'ಮೇಡಂ...ಹೆಂಗೆ ತಗಂಡು ಹೋಗ್ತೀರಾ? ನೀವೇ ಹೊಡ್ಕೊಂಡು ಹೋಗ್ತೀರಾ' ಎಂದು ಆ ಹುಡುಗ ಕೇಳಿದಾಗಲೇ ಅವಳಿಗೆ ಗ್ರಹಿಕೆಗೆ ನಿಲುಕಿದ್ದು ಇಲ್ಲಿಂದ ತಮ್ಮ ಮನೆ ಏನಿಲ್ಲವೆಂದರೂ ಏಳೆಂಟು ಮೈಲಿ ಆಗುತ್ತೆ, ಆಫೀಸಿನ ಬ್ಯಾಕ್ ಪ್ಯಾಕ್ ಏರಿಸಿಕೊಂಡು ಅಷ್ಟು ದೂರ ಸೈಕಲ್ ಹೊಡೆಯೋದು ಸಾಧ್ಯವೇ ಇಲ್ಲ ಎಂದು.

'ಅಯ್ಯೋ. ಅಷ್ಟು ದೂರ ಹೊಡೆಯೋದು ಕಷ್ಟ. ಈಗ ಅಭ್ಯಾಸ ಬಿಟ್ಟುಹೋಗಿದೆ. ಇನ್ನು ಮೇಲೆ ಅಭ್ಯಾಸ ಮಾಡಿಕೋಬೇಕು' ವಿನುತಾಳ ಗಲಿಬಿಲಿಯನ್ನು ಗಮನಿಸಿದ ಹುಡುಗ, 'ಇರಿ, ಪೋರ್ಟರ್ ಯಾವುದಾದರೂ ಬುಕ್ ಮಾಡಣ' ಎಂದು ತಾನೇ ಬುಕ್ ಮಾಡಿದ. 'ಇನ್ನೊಂದು ಗಂಟೆಯಲ್ಲಿ ಬರುತ್ತೆ. ಅವನಿಗೆ ನೀವು ಅಲ್ಲೆ ದುಡ್ಡು ಕೊಡಿ' ಎಂದವ ಸೈಕಲ್ ಹ್ಯಾಗೆ ಇಟ್ಟುಕೋಬೇಕು ಎಂದು ಒಂದೆರಡು ಪುಕ್ಕಟೆ ಸಲಹೆ ಕೊಟ್ಟ.

ಸೈಕಲನ್ನು ಎಲ್ಲಿಡುವುದೆಂದು ಆಗಲೇ ಯೋಚನೆಯನ್ನೂ ಮಾಡಿಯಾಗಿತ್ತು. ತಮ್ಮ ಪಾರ್ಕಿಂಗ್ ಜಾಗದಲ್ಲಂತೂ ಆಗುವುದಿಲ್ಲ. ಅಲ್ಲದೇ ಸದ್ಯಕ್ಕಾದರೂ ರಮೇಶನ ಕಣ್ಣಿನಿಂದ ಮುಚ್ಚಿಡುವ ಇರಾದೆಯೂ ಇದೆಯಲ್ಲ. ಮಕ್ಕಳ ಹೆಚ್ಚುವರಿ ಸೈಕಲ್ಲುಗಳನ್ನು ಇಡಲೆಂದು ಅಪಾರ್ಟ್ಮೆಂಟಿನಲ್ಲಿ ಒಂದು ಮೂಲೆಯಲ್ಲಿ ಸ್ವಲ್ಪ ಜಾಗ ಮಾಡಿಟ್ಟಿದ್ದರು. ಅಲ್ಲಿಯೇ ಹೇಗಾದ್ರೂ ಮಾಡಿ ಇಡಬೇಕು. ಏನೇ ಆದ್ರೂ ರಮೇಶನಿಗೆ ಸೈಕಲ್ಲಿನ ಸುಳಿವು ಹತ್ತುವುದು ಬೇಡ ಎಂದೆಲ್ಲ ಯೋಚಿಸುತ್ತ ಖುಷಿಯೆನ್ನಿಸಿತು.

ವಿನುತಾ ಮನೆ ತಲುಪಿ, ಮುಖ ತೊಳೆದು, ಟೀ ಕುಡಿಯುವಾಗ ಜಾಗಿಂಗ್ ಡ್ರೆಸ್ ಹಾಕೋಬೇಕು ಎಂದು ನೆನಪಾಗಿ, ಹಾಕಿಕೊಳ್ಳುವಷ್ಟರಲ್ಲಿ ಪೋರ್ಟರ್ ಬಂದಿದ್ದ. ಸೆಕ್ಯುರಿಟಿಯವನಿಗೆ ಹೇಳಿ, ಅದನ್ನು ಒಳ ತರುವಾಗ, 'ವಿನುತಾ ಎಂದರೆ ಈ ಇವಳು. ವಿನುತಾ ಎಂದರೆ ಹೀಗೆ ಸೈಕಲ್ ಹ್ಯಾಂಡಲ್ ಹಿಡಿದವಳು' ಎಂದು ತನಗೆಯೇ ನಾಕಾರು ಬಾರಿ ಹೇಳಿಕೊಂಡಳು. ಅಪಾರ್ಟ್ಮೆಂಟಿನ ಒಳಗೆ ವಾಕ್ ಮಾಡುವ ದಾರಿಯಲ್ಲೇ ಸೈಕಲ್ ಹೊಡೆಯಲು ಆಸ್ಪದವಿತ್ತು. ಇವತ್ತು ಒಂದೆರಡು ರೌಂಡ್ ಆದ್ರೂ ಹಾಕುವುದೇ ಎಂದುಕೊಂಡು ಹತ್ತಿದಳು.

'ಆಂಟಿ...ಹೊಸದಾ?' 'ನೀವೂ ಸೈಕಲ್